ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 07-01-1981.

# *ಸಂಗಮಯುಗೀ ಚಕ್ರವರ್ತಿತ್ವದ ಹೆಸರಿನಿಂದ ಸತ್ಯಯುಗೀ ಚಕ್ರವರ್ತಿತ್ವ*

("संगमयुगी बादशाही बनाम सतयुगी बादशाही")

ಬಾಪ್‌ದಾದಾರವರು ಇಂದು ಸಂಗಮಯುಗಿ ನಿಶ್ಚಿಂತಪುರಿಯ ರಾಜರುಗಳ ಸಭೆಯನ್ನು ನೋಡುತ್ತಿದ್ದಾರೆ. ಸಂಗಮಯುಗವಿರುವುದೇ ನಿಶ್ಚಿಂತಪುರ, ಸಂಗಮಯುಗೀ ಸರ್ವಬ್ರಾಹ್ಮಣರು ನಿಶ್ಚಿಂತಪುರಿಯ ರಾಜರಾಗಿದ್ದಾರೆ. ಸತ್ಯಯುಗೀ ರಾಜ್ಯಭಾಗ್ಯವು ಈ ಸಂಗಮಯುಗದ ನಿಶ್ಚಿಂತಪುರಿಯ ರಾಜ್ಯಭಾಗ್ಯದ ಮುಂದೆ ಏನೂ ಇಲ್ಲ. ವರ್ತಮಾನ ಸಮಯದ ಪ್ರಾಪ್ತಿಯ ನಶೆ, ಖುಷಿ, ಸತ್ಯಯುಗದ ರಾಜ್ಯಭಾಗ್ಯಕ್ಕಿಂತಲೂ ಪದಮಪಟ್ಟು ಶ್ರೇಷ್ಠವಾಗಿದೆ.

ಇಂದು ವತನದಲ್ಲಿ ಸತ್ಯಯುಗದ ರಾಜಧಾನಿ ಮತ್ತು ಸಂಗಮ ಯುಗದ ರಾಜಧಾನಿ ಈ ಎರಡರ ಅಂತರದ ಮೇಲೆ ವಾರ್ತಾಲಾಪ ನಡೆಯುತ್ತಿತ್ತು. ಸತ್ಯಯುಗದ ರಾಜಧಾನಿಯ ಮಾತುಗಳಂತು ಅಂದು ಬಹಳ ಕೇಳಿದಿರಿ, ಮತ್ತು ಬಹಳ ಖುಷಿಯಾಗಿದ್ದೀರಿ. ಆದರೆ ಸಂಗಮಯುಗದ ಶ್ರೇಷ್ಠತೆಯು ಎಷ್ಟೊಂದು ಶ್ರೇಷ್ಠವಾಗಿದೆ. ಅದರಲ್ಲಿಯೂ ಅನುಭವಿಯಾಗಿದ್ದೀರಲ್ಲವೆ?

1. ಸತ್ಯಯುಗದ ದಿನಚರಿಯಲ್ಲಿ ಪ್ರಕೃತಿಯಲ್ಲಿ ನ್ಯಾಚುರಲ್ ನಾದವು ಏಳಿಸುತ್ತದೆ ಆದರೆ ಸಂಗಮಯುಗೀ ಬ್ರಾಹ್ಮಣರ ಆದಿಕಾಲವಾದ ಅಮೃತವೇಳೆಯಿಂದ ಶ್ರೇಷ್ಠತೆಯನ್ನು ನೋಡಿದರೆ ಎಷ್ಟೊಂದು ಮಹಾನ್ ಆಗಿದೆ. ಅಲ್ಲಿ ಪ್ರಕೃತಿಯ ಸಾಧನವಿದೆ ಮತ್ತು ಸಂಗಮಯುಗದಲ್ಲಿ ಆದಿಕಾಲ ಅರ್ಥಾತ್ ಅಮೃತವೇಳೆಯಲ್ಲಿ ಯಾರು ಏಬ್ಬಿಸುತ್ತಾರೆ? ಸ್ವಯಂ ಪ್ರಕೃತಿಯ ಮಾಲೀಕ ಭಗವಂತನು ನಿಮ್ಮನ್ನು ಏಬ್ಬಿಸುತ್ತಾರೆ.

2. ಮಧುರವಾದ್ಯಗಳಲ್ಲಿ ಏನು ಕೇಳುತ್ತೀರಿ? ತಂದೆಯು ಪ್ರತಿನಿತ್ಯವೂ “ಮಕ್ಕಳೇ- ಮಧುರ ಮಕ್ಕಳೇ” ಎಂದು ಹೇಳುತ್ತಾ ಕರೆಯುತ್ತಾರೆ. ಈ ಸ್ವಾಭಾವಿಕ ನಾದ, ಈಶ್ವರೀಯ ನಾದವು ಸತ್ಯಯುಗದ ಪ್ರಕೃತಿಯ ನಾದಕ್ಕಿಂತಲೂ ಮಹಾನ್ ಆಗಿದೆ. ಅದರ ಅನುಭವಿಯಾಗಿದ್ದೀರಲ್ಲವೆ? ಅಂದಮೇಲೆ ಸತ್ಯಯುಗದ ನಾದವು ಮಹಾನ್ ಆಗಿದೆಯೇ ಅಥವಾ ಈ ಸಂಗಮಯುಗದ ನಾದವು ಮಹಾನ್ ಆಗಿದೆಯೇ? ಜೊತೆಜೊತೆಯಲ್ಲಿ ಸತ್ಯಯುಗದ ಸಂಸ್ಕಾರ ಮತ್ತು ಪ್ರಾಲಬ್ಧವನ್ನು ರೂಪಿಸಿಕೊಳ್ಳುವ ಹಾಗೂ ತುಂಬಿಕೊಳ್ಳುವ ಸಮಯವಾಗಿದೆ. ಸಂಸ್ಕಾರವು ತುಂಬಿಕೊಳ್ಳುತ್ತೀರಿ, ಪ್ರಾಲಬ್ಧವಾಗುತ್ತದೆ. ಇದೇ ಸಂಗಮಯುಗದಲ್ಲಿಯೇ ಎಲ್ಲವೂ ಆಗುತ್ತದೆ.

3. ಅಲ್ಲಿ ಸತೋಪ್ರಧಾನ ಅತಿ ಸ್ವಾಧಿಷ್ಟವಾದ ರಸವಿರುವ ವೃಕ್ಷದ ಫಲವನ್ನು ತಿನ್ನುತ್ತೀರಿ, ಇಲ್ಲಿ ವೃಕ್ಷಪತಿಯ ಮೂಲಕ ಸರ್ವಸಂಬಂಧಗಳ ರಸ(ಪ್ರಾಪ್ತಿ), ಸರ್ವಪ್ರಾಪ್ತಿ ಸಂಪನ್ನವಾದ ಪ್ರತ್ಯಕ್ಷಫಲವನ್ನು ತಿನ್ನುತ್ತೀರಿ.

4. ಅದು ಗೋಲ್ಡನೇಜ್‌ನ ಫಲವಾಗಿದೆ ಮತ್ತು ಇದು ಡೈಮಂಡ್ ಏಜ್‌ನ ಫಲವಾಗಿದೆ. ಅಂದಮೇಲೆ ಯಾವುದು ಶ್ರೇಷ್ಠವಾಯಿತು?

5. ಅಲ್ಲಿ ದಾಸ-ದಾಸಿಯರ ಕೈಯಲ್ಲಿ ಬೆಳೆಯುತ್ತಾರೆ, ಇಲ್ಲಿ ತಂದೆಯ ಕೈಗಳಲ್ಲಿ ಬೆಳೆಯುತ್ತಿದ್ದೀರಿ (ಪಾಲನೆ ಆಗುತ್ತದೆ).

6. ಅಲ್ಲಿ ಮಹಾನ್ ಆತ್ಮರು ತಂದೆ-ತಾಯಿಯಾಗುತ್ತಾರೆ. ಇಲ್ಲಿ ಪರಮಾತ್ಮನು ಮಾತಾಪಿತನಾಗಿದ್ದಾರೆ.

7. ಅಲ್ಲಿ ರತ್ನಜಡಿತ ಉಯ್ಯಾಲೆಯಲ್ಲಿ ತೂಗುತ್ತೀರಿ, ಇಲ್ಲಿ ಎಲ್ಲದಕ್ಕಿಂತ ಅತಿದೊಡ್ಡ ಉಯ್ಯಾಲೆಯು ಯಾವುದಾಗಿದೆ, ಅದನ್ನು ತಿಳಿದಿದ್ದೀರಾ? ತಂದೆಯ ಮಡಿಲಿನ ಉಯ್ಯಾಲೆಯಾಗಿದೆ. ಮಕ್ಕಳಿಗಾಗಿ ಎಲ್ಲದಕ್ಕಿಂತ ಪ್ರಿಯವಾದ ಉಯ್ಯಾಲೆಯು ಮಾತಾಪಿತನ

ಮಡಿಲಾಗಿದೆ, ಕೇವಲ ಒಂದು ಉಯ್ಯಾಲೆಯಲ್ಲ, ಭಿನ್ನ-ಭಿನ್ನವಾದ ಉಯ್ಯಾಲೆಗಳಲ್ಲಿ ತೂಗಲು ಸಾಧ್ಯವಿದೆ. ಅತೀಂದ್ರಿಯ ಸುಖದ ಉಯ್ಯಾಲೆ, ಖುಷಿಗಳ ಉಯ್ಯಾಲೆ, ಅಲ್ಲಿ ರತ್ನಜಡಿತ ಉಯ್ಯಾಲೆಯಿದೆ ಮತ್ತು ಈ ಉಯ್ಯಾಲೆಯು ಎಷ್ಟೊಂದು ಮಹಾನ್ ಆಗಿದೆ.

8. ಅಲ್ಲಿ ರತ್ನಗಳೊಂದಿಗೆ ಆಟವಾಡುತ್ತೀರಿ, ಆಟಿಕೆಗಳೊಂದಿಗೆ ಆಡುತ್ತೀರಿ, ಪರಸ್ಪರದಲ್ಲಿ ಆಡುತ್ತೀರಿ ಆದರೆ ಇಲ್ಲಿ ಬಾಬಾರವರು ಹೇಳುತ್ತಾರೆ ಸದಾ ನನ್ನಿಂದ, ಯಾವ ರೂಪದಲ್ಲಿ ಬಯಸುತ್ತೀರೋ ಅದೇರೂಪದಲ್ಲಿ ಆಟವಾಡಬಹುದು. ಸಖನಾಗಿ ಆಟವಾಡಬಹುದು. ಭಾಂಧುವನ್ನಾಗಿ ಮಾಡಿಕೊಂಡೂ ಆಡಬಹುದು ಮಗನನ್ನಾಗಿ ಮಾಡಿಕೊಂಡೂ ಆಡಬಹುದು, ಮಗುವಾಗಿಯೂ ಆಡಬಹುದು. ಇಂತಹ ಅವಿನಾಶಿ ಆಟಿಕೆಯಂತು ಎಂದೂ ಸಿಗುವುದಿಲ್ಲ. ಅದು ಮುರಿಯುವುದೂ ಇಲ್ಲ, ಬೀಳುವುದೂ ಇಲ್ಲ ಮತ್ತು ಖರ್ಚನ್ನೂ ಮಾಡಬೇಕಾಗಿಲ್ಲ.

9. ಅಲ್ಲಿ ಆರಾಮದಿಂದ ದಪ್ಪಹಾಸಿಗೆಯ ಮೇಲೆ ಮಲಗುತ್ತೀರಿ, ಇಲ್ಲಿ ನೆನಪಿನ ಹಾಸಿಗೆಯ ಮೇಲೆ ಮಲಗಿಬಿಡಿ.

10. ಅಲ್ಲಿ ನಿದ್ರಾಲೋಕದಲ್ಲಿ ಹೊರಟುಹೋಗುತ್ತೀರಿ ಆದರೆ ಸಂಗಮದಲ್ಲಿ ತಂದೆಯ ಜೊತೆ ಸೂಕ್ಷ್ಮ ವತನದಲ್ಲಿ ಹೊರಟುಹೋಗುತ್ತೀರಿ.

11. ಅಲ್ಲಿ ವಿಮಾನಗಳಲ್ಲಿ ಕೇವಲ ಒಂದು ಲೋಕದ ಪರಿಕ್ರಮಣವನ್ನು ಮಾಡಬಹುದು. ಈಗ ಬುದ್ಧಿಯೆಂಬ ವಿಮಾನದ ಮೂಲಕ ಮೂರೂಲೋಕಗಳ ಪರಿಕ್ರಮಣ ಮಾಡಬಹುದು.

12. ಅಲ್ಲಿ ವಿಶ್ವನಾಥ ಎಂದು ಕರೆಯಿಸಿಕೊಳ್ಳುತ್ತೀರಿ ಮತ್ತು ಈಗ ತ್ರಿಲೋಕಿನಾಥನಾಗಿದ್ದೀರಿ.

13. ಅಲ್ಲಿ ಎರಡು ನೇತ್ರದವರಾಗಿರುತ್ತೀರಿ, ಇಲ್ಲಿ ತ್ರಿನೇತ್ರೀಯಾಗಿದ್ದೀರಿ.

14. ಸಂಗಮಯುಗದಲ್ಲಿ ಜ್ಞಾನ ಸಂಪನ್ನ, ಶಕ್ತಿ ಸಂಪನ್ನ, ದಯಾ ಹೃದಯಗಳಾಗಿ ಇರುತ್ತೀರಿ, ಇದರ ಅಂತರದಲ್ಲಿ ಅಲ್ಲೇನಾಗಿಬಿಡುತ್ತೀರಿ? ರಾಯಲ್ ಬುದ್ದು ಆಗಿಬಿಡುತ್ತೀರಿ.

15. ಪ್ರಪಂಚದ ಲೆಕ್ಕದಿಂದ ಪರಮಪೂಜ್ಯರಾಗುತ್ತೀರಿ, ವಿಶ್ವದ ಮೂಲಕ ಮಾನನೀಯವಾಗುತ್ತೀರಿ ಆದರೆ ಜ್ಞಾನದ ಲೆಕ್ಕದಿಂದ ಮಹಾನ್ ಅಂತರವಾಗಿಬಿಡುತ್ತದೆ.

16, ಇಲ್ಲಂತು ಗುಡ್‌ಮಾರ್ನಿಂಗ್, ಗುಡ್‌ನೈಟ್ ತಂದೆಯೊಂದಿಗೆ ಮಾಡುತ್ತೀರಿ ಮತ್ತು ಅಲ್ಲಿ ಆತ್ಮರು ಆತ್ಮರಿಗೆ ಮಾಡುತ್ತಾರೆ.

17. ಅಲ್ಲಿ ವಿಶ್ವರಾಜ್ಯಾಧಿಕಾರಿಯಾಗುತ್ತೀರಿ, ರಾಜ್ಯಕರ್ತರಾಗುತ್ತೀರಿ ಮತ್ತು ಇಲ್ಲಿ ವಿಶ್ವಕಲ್ಯಾಣಕಾರಿ, ಮಹಾದಾನಿ, ವರದಾನಿಯಾಗಿದ್ದೀರಿ, ಅಂದಮೇಲೆ ಯಾರು ಶ್ರೇಷ್ಠರಾದರು? ಸತ್ಯಯುಗದ ಮಾತುಗಳನ್ನಂತು ಕೇಳಿ ಸದಾ ಖುಷಿಯ ಸ್ವರೂಪರಾಗಿಬಿಡಿ.

18. ಅಲ್ಲಿ ವಿಭಿನ್ನ ಪ್ರಕಾರದ ಭೋಜನವನ್ನು ಸೇವಿಸುತ್ತೀರಿ ಮತ್ತು ಇಲ್ಲಿ ಬ್ರಹ್ಮಾಭೋಜನವನ್ನು ಸೇವಿಸುತ್ತೀರಿ, ಅದರ ಮಹಿಮೆಯಲ್ಲಿ ದೇವತೆಗಳ ಭೋಜನಕ್ಕಿಂತಲೂ ಅತಿಶ್ರೇಷ್ಠವೆಂದು ಹೇಳುತ್ತಾರೆ. ಅಂದಮೇಲೆ ಸದಾ ಸತ್ಯಯುಗೀ ಪ್ರಾಲಬ್ಧ ಮತ್ತು ವರ್ತಮಾನ ಸಮಯದ ಮಹತ್ವಕ್ಕೆ ಹಾಗೂ ಪ್ರಾಪ್ತಿಯನ್ನು ಜೊತೆಜೊತೆಯಲ್ಲಿ ಇಟ್ಟುಕೊಂಡಾಗ ವರ್ತಮಾನ ಸಮಯವನ್ನು ತಿಳಿದುಕೊಳ್ಳುತ್ತಾ, ಪ್ರತೀ ಸೆಕೆಂಡ್ ಮತ್ತು ಸಂಕಲ್ಪವನ್ನು ಶ್ರೇಷ್ಠವನ್ನಾಗಿ ಮಾಡಿಕೊಳ್ಳಬಹುದು. ತಿಳಿಯಿತೆ! ಇಂದು ಪಂಜಾಬಿನ ಜೋನ್ ಬಂದಿದೆ. ಪಂಜಾಬಿನ ಎರಡು ವಿಶೇಷತೆಗಳಿವೆ. ಒಂದು ಪಂಜಾಬಿನ ನೀರು ಮತ್ತೊಂದು ಪಂಜಾಬಿನ ವ್ಯವಸಾಯ. ಕೌರವ ಸರ್ಕಾರವು ಪಂಜಾಬಿನಲ್ಲಿ ಎರಡು ವಿಶೇಷತೆಯನ್ನು ತೋರಿಸಿದೆ, ಮತ್ತು ಪಾಂಡವ ಸರ್ಕಾರದ ಕಡೆಯಿಂದ ಯಾವ ವಿಶೇಷತೆಯನ್ನು ತೋರಿಸಿದ್ದೀರಿ! ಪಂಜಾಬಿನ ಜ್ಞಾನನದಿಗಳೆಂಬ ಭುಜಗಳಂತು ಹೊರತೆಗೆದಿದ್ದೀರಿ ಆದರೆ ಅದ್ಭುತವನ್ನೂ ಮಾಡಿದ್ದೀರಾ. ಪಂಜಾಬಿನ ನದಿಗಳು ಪಂಜಾಬಿನಲ್ಲಿಯೇ ಇರುತ್ತವೆ ಆದರೆ ಪಂಜಾಬಿನ ನೀರು ಪ್ರಸಿದ್ಧವಾಗಿಬಿಟ್ಟಿದೆ. ಹೇಗೆ ಪಂಜಾಬಿನಲ್ಲಿ ಸೀಜನ್ ಇಲ್ಲದೆಯೂ

ಆಹಾರ ಉತ್ಪಾದನೆಯನ್ನು ಮಾಡಿಬಿಡುತ್ತಾರೆ, ಅದೇರೀತಿ ಸಾಧನಗಳನ್ನು ಮಾಡಿದ್ದಾರೆಂದರೆ 12 ತಿಂಗಳಿಗೂ 12 ಫಲವನ್ನು ಕೊಡಬೇಕು. ಯಾವಾಗ ವೈಜ್ಞಾನಿಕ ಶಕ್ತಿಯಿಂದ ಸೀಜನ್ ಇಲ್ಲದೆಯೂ ಆಹಾರೋತ್ಪಾದನೆ ಮಾಡಲಾಗುತ್ತದೆಯೋ ಅಂದಮೇಲೆ ಶಾಂತಿಯ ಶಕ್ತಿಯಿಂದ ಸಂಗಮಯುಗದ ಫುಲ್ ಸೀಜನ್ ಆಗಿದ್ದರೂ, ಪ್ರತಿತಿಂಗಳಿನಲ್ಲಿ ಫಲವನ್ನು ಕೊಡಲು ಸಾಧ್ಯವಿಲ್ಲವೇ? ಹೇಗೆ ಅವರುಗಳು ತಮ್ಮ ಸಾಧನವನ್ನು ಉಪಯೋಗ ಮಾಡುತ್ತಾರೆ, ಅದರಿಂದ ಅಸಂಭವದಿಂದ ಸಂಭವಮಾಡಿ ತೋರಿಸಿದಾಗ ಸಾಧನೆಯ ಮೂಲಕ ಪಂಜಾಬಿನ ಧರಣಿಯನ್ನು ಪರಿವರ್ತನೆ ಮಾಡಿರಿ. ಪ್ರತ್ಯಕ್ಷಫಲವನ್ನು ಕೊಡಬೇಕಾಗುತ್ತದೆ. ಪಂಜಾಬಿನವರು ಈ ಹೊಸವರ್ಷದಲ್ಲಿ ಸ್ಲೋಗನ್ ನೆನಪಿಟ್ಟುಕೊಳ್ಳಬೇಕಾಗಿದೆ. ಯಾವ ಸ್ಲೋಗನ್? *"ತಕ್ಷಣ ದಾನ ಮಹಾಪುಣ್ಯ"* ಈಗಂತು ಜ್ಞಾನಗಂಗೆಯ ಪಾತ್ರವಿದೆ, ಪಾಂಡವರು ಬೆನ್ನೆಲುಬಾಗಿದ್ದಾರೆ. ಆದರೆ ಮುಂದೆ ನಿಮಿತ್ತವಾಗಿ ಶಕ್ತಿಯರನ್ನು ಇಡಲಾಗುತ್ತದೆ. ಇದರಲ್ಲಿಯೂ ಪಾಂಡವರಿಗೆ ಲಾಭವಿದೆ, ಇಲ್ಲವೆಂದರೆ ತಲೆಬಾಗಿಸಬೇಕಾಗುತ್ತದೆ. ವಿಶೇಷವಾಗಿ ಪಂಜಾಬಿನಲ್ಲಂತು ಬಹಳ ತಲೆಬಾಗುತ್ತಾರೆ. ಆದ್ದರಿಂದ ಶಕ್ತಿಯರು ಗೈಡ್ ಮತ್ತು ಪಾಂಡವರು ಗಾರ್ಡ್ ಸರಿಯಾಗಿದೆ. ಗಾರ್ಡ್ ಮತ್ತು ಗಾಡ್ ರಾಶಿಯು ಸೇರಿಬಿಡುತ್ತದೆ. ಹೇಗೆ ತಂದೆಯು ಬೆನ್ನೆಲುಬಾಗಿ ಶಕ್ತಿಯರನ್ನು ಮುಂದಿಟ್ಟಿದ್ದಾರೆ, ಹಾಗೆಯೇ ಪಾಂಡವರೂ ಸಹ ತಂದೆಯ ಸಮಾನ ಬೆನ್ನೆಲುಬಾಗಿದ್ದು ಶಕ್ತಿಯರನ್ನು ಮುಂದಿಡಬೇಕು. ಅಂದಮೇಲೆ ಈಗ ಹೊಸವರ್ಷದಲ್ಲಿ ಪಂಜಾಬಿನವರು ಯಾವ ನವೀನತೆಯನ್ನು ತೋರಿಸುತ್ತೀರಿ? ಧರಣಿಯ ಪರಿವರ್ತನೆಯ ನವೀನತೆ, ತಿಳಿಯಿತೆ.

ವಿದೇಶದ ಸೇವೆಯಲ್ಲಿ ಒಳ್ಳೆಯ ಮಹಾವೀರ-ಮಹಾ ವೀರಿಣಿಯರು ವಿಜ್ಞಾನದ ಮೇಲೆ ಶಾಂತಿಯ ಶಕ್ತಿಯಿಂದ ವಿಜಯವನ್ನು ಪ್ರಾಪ್ತಿ ಮಾಡಿಕೊಳ್ಳುವವರು ತಯಾರಾಗುತ್ತಿದ್ದಾರೆ. ಒಳ್ಳೊಳ್ಳೆಯ ಸೇವಾಧಾರಿಗಳು, ತಂದೆಯ ಭುಜಗಳು ತಯಾರಾಗಿ ಬಿಟ್ಟಿದ್ದಾರೆ. ಬಲಭುಜವಾಗಿದ್ದಾರೆ. ಬಲಭುಜದ ಮೂಲಕ ಸದಾ ಶ್ರೇಷ್ಠ ಮತ್ತು ಸಹಜಕಾರ್ಯವಾಗುತ್ತದೆ. ಅಂದಮೇಲೆ ವಿದೇಶದಲ್ಲಿ ಬಲಭುಜಗಳು ತಯಾರಾಗುತ್ತಿದ್ದಾರೆ. ಒಳ್ಳೆಯದು ಮತ್ತೆ ಮಿಲನವಾಗುತ್ತೇವೆ. ಆಗ ವಿಶೇಷತೆಯನ್ನು ತಿಳಿಸುತ್ತೇವೆ. ದೇಶ ಮತ್ತು ವಿದೇಶವೆರಡೂ ಮಕ್ಕಳಿಗೆ ಬಾಪ್‌ದಾದಾರವರು ಶುಭಾಷಯಗಳನ್ನು ಕೊಡುತ್ತಾರೆ. ಎಲ್ಲರೂ ಸಮೀಪ ಅಥವಾ ದೂರದಿಂದ ಮಿಲನದ ಮೇಳದಲ್ಲಿ ತಲುಪಿದ್ದೀರಿ.

**ಈ ರೀತಿ ಸದಾ ತಂದೆಯೊಂದಿಗೆ ಮಿಲನವನ್ನಾಚರಿಸುವ, ಹಗಲು-ರಾತ್ರಿ- "ಒಬ್ಬ ತಂದೆಯ ಹೊರತು ಮತ್ಯಾರೂ ಇಲ್ಲ" ಇದೇ ಗುಂಗಿನಲ್ಲಿರುವ, ಸದಾ ವಿಶ್ವದ ಆತ್ಮರಪ್ರತಿ ಸರ್ವಖಜಾನೆಗಳಿಂದ ಮಹಾದಾನ ಮತ್ತು ವರದಾನವನ್ನು ಕೊಡುವಂತಹ, ಸದಾ ಸಂಗಮಯುಗದ ವಿಶೇಷತೆಯನ್ನು ಮುಂದಿಟ್ಟುಕೊಂಡು ಶ್ರೇಷ್ಠಭಾಗ್ಯದ ಸ್ಮೃತಿಸ್ವರೂಪ, ಇಂತಹ ಸದಾ ಶ್ರೇಷ್ಠವೃತ್ತಿ, ಶ್ರೇಷ್ಠಪ್ರಕಂಪನಗಳ ಮೂಲಕ ವಿಶ್ವಕಲ್ಯಾಣಕಾರಿ ಆತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ಕರ್ಮೇಂದ್ರಿಯಗಳ ರಾಜರೇ ರಾಜ್ಯಾಧಾಕಾರಿ ಪಂಜಾಬ್ ಜೋನಿನ ಪಾರ್ಟಿಯೊಂದಿಗೆ:-**

ಪಂಜಾಬ್ ವಾಸಿಗಳಿಗೆ ವಿಶೇಷ ಆತ್ಮರಾಗಿರುವ ಕಾರಣದಿಂದ ವಿಶೇಷ ಫಲವನ್ನು ಕೊಡಬೇಕಾಗುತ್ತದೆ. ಪಂಜಾಬಿನಲ್ಲಿ ವಿಶೇಷವಾಗಿ 'ಅಕಾಲಸಿಂಹಾಸನ'ದ ನೆನಪಾರ್ಥವಿದೆ. ಎಲ್ಲಿ ಸಿಂಹಾಸನದ ನೆನಪಾರ್ಥ ಇದೆಯೋ, ಅಲ್ಲಿನ ನಿವಾಸಿಗಳೂ ಸಹ ಸ್ವಯಂ ಸದಾ ಅಕಾಲ ಸಿಂಹಾಸನದಲ್ಲಿ ವಿರಾಜಮಾನವಾಗಿದ್ದಾರೆ. ತಮ್ಮ ಕರ್ಮೇಂದ್ರಿಯಗಳ ಮೂಲಕ ಸಾಕ್ಷಿಯಾಗಿದ್ದು ಕಾರ್ಯವನ್ನು ಮಾಡುತ್ತಾ ಸ್ವರಾಜ್ಯಾಧಿಕಾರಿ ಆಗಿದ್ದೀರಿ. ಅಕಾಲ ಸಿಂಹಾಸನಾಧಿಕಾರಿ ಆತ್ಮ ಅರ್ಥಾತ್ ರಾಜ್ಯಾಧಿಕಾರಿ, ಇಂತಹ ರಾಜ್ಯಾಧಿಕಾರಿಯಾಗಿ ನಡೆಯುತ್ತೀರಾ? ಕರ್ಮೇಂದ್ರಿಯಗಳಿಗೆ ಅಧೀನರಂತು ಆಗುವುದಿಲ್ಲವೇ. ಎಲ್ಲಿ ಅಧೀನತೆ ಇರುತ್ತದೆ, ಅಲ್ಲಿ ಬಲಹೀನತೆಯಿರುತ್ತದೆ. ಅರ್ಧಕಲ್ಪ ಬಲಹೀನರಾಗಿದ್ದಿರಿ, ಈಗ ತಮ್ಮ ರಾಜ್ಯವನ್ನು ತೆಗೆದುಕೊಂಡಿದ್ದೀರಾ? ರಾಜ್ಯ ಅಥವಾ ಅಧಿಕಾರವನ್ನು ತೆಗೆದುಕೊಂಡ ನಂತರವೇ ಅಧೀನತೆಯು ಸಮಾಪ್ತಿ ಆಗಿಬಿಡುತ್ತದೆ. ಅಂದಮೇಲೆ ರಾಜ್ಯಾಧಿಕಾರಿ ಅಲ್ಲವೆ! ಯಾವುದೇ

ಕರ್ಮೇಂದ್ರಿಯ ಅರ್ಥಾತ್ ತಮ್ಮಮೇಲೆ ಯಾವುದೇ ಕಾರ್ಯಕರ್ತನು ರಾಜ್ಯಾಡಳಿತ ಮಾಡುವುದಿಲ್ಲ ತಾನೇ? ಹೇಗೆ ವರ್ತಮಾನದ ಪ್ರಪಂಚದಲ್ಲಿ ಪ್ರಜೆಗಳ ಮೇಲೆ ಪ್ರಜೆಗಳ ರಾಜ್ಯವಿದೆಯೋ, ಹಾಗೆಯೇ ತಮ್ಮ ಜೀವನದಲ್ಲಿ ಪ್ರಜೆಗಳ ರಾಜ್ಯವಂತು ಇಲ್ಲ ತಾನೇ? ಕರ್ಮೇಂದ್ರಿಯಗಳು ಪ್ರಜೆಗಳಾಗಿವೆ. ಪ್ರಜೆಗಳ ರಾಜ್ಯದಲ್ಲಿ ಸದಾ ಏರುಪೇರುಗಳಿರುತ್ತವೆ ಮತ್ತು ರಾಜನ ರಾಜ್ಯದಲ್ಲಿ ಅಚಲರಾಜ್ಯವು ನಡೆಯುತ್ತದೆ. ಅಂದಮೇಲೆ ಅಚಲರಾಜ್ಯವು ನಡೆಯುತ್ತಿದೆಯಲ್ಲವೆ?

ವರ್ತಮಾನ ಸಮಯದಲ್ಲಿ ಸಂಕಲ್ಪದ ಏರುಪೇರೂ ಸಹ ದೊಡ್ಡದೆಂದು ಎಣಿಕೆ ಮಾಡಲಾಗುತ್ತದೆ. ಮೊದಲು ಸಮಯವಿತ್ತು, ಆಗ ಸಂಕಲ್ಪವನ್ನು ಫ್ರೀಯಾಗಿ ಬಿಡುತ್ತಿದ್ದರು, ವಾಚಾ-ಕರ್ಮಾಣದಲ್ಲಿ ಗಮನವನ್ನಿಡುತ್ತಿದ್ದರು ಆದರೆ ಈಗ ಮನಸ್ಸಿನಲ್ಲಿಯೂ ಏರುಪೇರಿರಬಾರದು. ಏಕೆಂದರೆ ಕೊನೆಯಲ್ಲಿರುವುದೇ ಮನಸಾ ಮೂಲಕ ವಿಶ್ವಪರಿವರ್ತನೆ. ಈಗ ಮನಸ್ಸಿನ ಒಂದು ಸಂಕಲ್ಪವೂ ಸಹ ವ್ಯರ್ಥವಾಯಿತೆಂದರೆ ಬಹಳಷ್ಟು ಕಳೆದುಕೊಂಡಿರಿ. ಒಂದು ಸಂಕಲ್ಪವನ್ನೂ ಸಾಧಾರಣ ಮಾತೆಂದು ತಿಳಿಯಬಾರದು, ಇಷ್ಟು ಗಮನವಿರಲಿ, ಈಗ ಸಮಯವು ಬದಲಾಯಿತು, ಪುರುಷಾರ್ಥದ ಗತಿಯೂ ಬದಲಾಯಿತು ಅಂದಮೇಲೆ ಸಂಕಲ್ಪದಲ್ಲಿಯೇ ಫುಲ್ ಸ್ಟಾಪ್ ಆಗಬೇಕು. ಮನಸ್ಸಿನಲ್ಲಿಯೂ ಗಮನವಿಟ್ಟಾಗ 'ಏರುವಕಲೆ' ಎಂದು ಹೇಳಲಾಗುತ್ತದೆ. ಸದಾ ಏರುವಕಲೆಯಿರಲಿ, ಈಗ ಸದಾಕಾಲದ ವ್ಯಾಪಾರವೇ ಇರಬೇಕು.

**ವಿದೇಶದ ಪಾರ್ಟಿಯೊಂದಿಗೆ ಅವ್ಯಕ್ತ-ಬಾಪ್‌ದಾದಾರವರ ವಾರ್ತಾಲಾಪ:**

ಲಂಡನ್: ಸದಾ ತಮ್ಮ ಹೋಲಿಲ್ಯಾಂಡ್ ಸ್ಮೃತಿಯಲ್ಲಿರುತ್ತೀರಾ? ಹೋಲಿಲ್ಯಾಂಡ್‌ನಲ್ಲಿರುವವರು ಸದಾ ತಮ್ಮ ಹೋಲಿಸ್ಥಿತಿಯಲ್ಲಿ ಸ್ಥಿತರಾಗುತ್ತೀರಿ. ತಮ್ಮನ್ನು ಸದಾ ಸಂಪೂರ್ಣ ಪವಿತ್ರ ಆತ್ಮನ ಸ್ಥಿತಿಯಲ್ಲಿ ಅನುಭವ ಮಾಡುತ್ತೀರಾ? ಯಾವಾಗ ಇಲ್ಲಿ ಪವಿತ್ರತೆಯ ಕಿರೀಟಧಾರಿಯಾಗುತ್ತೀರೋ ಆಗಲೇ ಅಲ್ಲಿ ರತ್ನಜಡಿತ ಕಿರೀಟವೂ ಸಿಗುತ್ತದೆ. ಸದಾ ತಮ್ಮಮೇಲೆ ಪ್ರಕಾಶತೆಯ ಕಿರೀಟದ ಅನುಭವ ಮಾಡಿರಿ. ಯಾರು ರಾಜಕುಮಾರ ಮತ್ತು ರಾಜಕುಮಾರಿಯಾಗುತ್ತೀರೋ ಅವರೇ ಕಿರೀಟಧಾರಿಯಾಗುತ್ತಾರಲ್ಲವೆ. ತಾವಂತು ಸಾಹೇಬನ ಮಕ್ಕಳಾಗಿದ್ದೀರಿ ಅಂದಮೇಲೆ ಕಿರೀಟವಿರದಿರಲು ಹೇಗೆ ಸಾಧ್ಯ! ಲಂಡನ್ ನಿವಾಸಿಗಳಂತು ಎಲ್ಲರೂ ಕಿರೀಟಧಾರಿಯಲ್ಲವೆ? ಎಂತಹ ಕಿರೀಟಧಾರಿಯಾಗಬೇಕೆಂದರೆ, ಅದನ್ನು ಎಲ್ಲರೂ ನೋಡಿ ನಮಸ್ಕಾರ ಮಾಡಲಿ.

ಸದಾ ಇದೇ ಸ್ಮೃತಿಯಲ್ಲಿರಿ- ನಾವು ಪವಿತ್ರ ಆತ್ಮರು ಪವಿತ್ರತೆಯ ಪ್ರಕಾಶತೆಯ ಕಿರೀಟಧಾರಿಯಾಗಿದ್ದೇವೆ. ಮಾಯೆಯು ತಮ್ಮ ಕಿರೀಟವನ್ನಿಳಿಸುವುದಿಲ್ಲ ತಾನೆ? ಈಗ ಮಾಯೆಗೆ ಇಲ್ಲಿಯೇ ವಿದಾಯಿ ಕೊಟ್ಟು ಹೋಗಬೇಕಾಗಿದೆ. ಮಾಯೆಯ ರೂಪವನ್ನು ಪರಿವರ್ತನೆ ಮಾಡಿಕೊಂಡು ಹೋಗಬೇಕು. ಶತ್ರುವಿಗೆ ಬದಲಾಗಿ ಆಟಿಕೆಯ ರೂಪದಲ್ಲಿ ಬರಲಿ. ಇದನ್ನೇ ಹೊಸವರ್ಷದಲ್ಲಿ ಪರಿವರ್ತನೆ ಮಾಡಿರಿ.

ಅಮೇರಿಕಾ:- ಪಂಚ ಪಾಂಡವರಿದ್ದಾರೆ, ಪಂಚ ಪಾಂಡವರು ಕಲ್ಪದ ಮೊದಲೂ ಯಾವ ಚಮತ್ಕಾರವನ್ನು ಮಾಡಿದ್ದಿರಿ, ಐದಾಗಿದ್ದರೂ ಎಷ್ಟೊಂದು ಅಕ್ಷೋಣಿ ಸೇನೆಯ ಮೇಲೆ ವಿಜಯಿಯಾದರು. ವಿಜಯದ ಧ್ವಜವನ್ನು ಹಾರಿಸುವ ಪಾಂಡವಸೇನೆಯಾಗಿದ್ದೀರಲ್ಲವೆ? ಒಬ್ಬೊಬ್ಬ ಪಾಂಡವನು ಎಷ್ಟುಮಂದಿಗೆ ಸಮಾನವಾಗಿದ್ದೀರಿ? ಅವರು ಅಕ್ಷೋಣಿ ಸೇನೆ, ಇವರು ಐದು ಪಾಂಡವರು. ಅಂದಮೇಲೆ ಎಷ್ಟೊಂದು ಅಮೂಲ್ಯವಾದಿರಿ, ಈಗ ಅಮೇರಿಕಾದ ನಾಲ್ಕೂಕಡೆಯಲ್ಲಿ ಹರಡಿಬಿಡಬೇಕು. ಹೇಗೆ ಜಾಲವು ಹಾಸುತ್ತದೆಯಲ್ಲವೆ, ಹಾಗೆಯೇ ತಮ ಯೋಗಶಕ್ತಿಯ ಜಾಲವನ್ನು ಹಾಸಿದಾಗ, ಅಲೆಯುತ್ತಿರುವ ಆತ್ಮರು ತಲುಪುತ್ತಾರೆ. ಅಮೇರಿಕಾದಲ್ಲಿ ವಿಶೇಷ ಖುಷಿ ಮತ್ತು ಶಾಂತಿಯ ಅಭಿಲಾಷೆಯಿರುವ ಆತ್ಮರು ಹೆಚ್ಚಾಗಿದ್ದಾರೆ. ಅವರಿಗೆ ಖುಷಿ ಮತ್ತು ಶಾಂತಿಯ ದಾನವನ್ನು ಕೊಟ್ಟಾಗ ಅನೇಕರ ಆಶೀರ್ವಾದಗಳು ಸಿಗುತ್ತವೆ.

ಗಯಾನಾ ಪಾರ್ಟಿ:- ಸದಾ ಸೇವಾಧಾರಿ ರತ್ನಗಳಾಗಿದ್ದೀರಲ್ಲವೆ? ಪ್ರತಿಯೊಬ್ಬರ ಒಳಗೆ ಸೇವೆಯ ಸಂಸ್ಕಾರವು ಶರೀರದಲ್ಲಿ ರಕ್ತವು ಸಮಾವೇಶವಾಗಿರುವಂತೆ ತುಂಬಿದೆ. ಹೇಗೆ ಒಂದುವೇಳೆ ರಕ್ತವು ಹೊರಟುಹೋಯಿತೆಂದರೆ ಶರೀರವು ನಿಸ್ಸಾರವಾಗಿಬಿಡುತ್ತದೆಯೋ ಹಾಗೆಯೇ ಸೇವೆಯನ್ನು ಮಾಡಲಿಲ್ಲವೆಂದರೆ ಅದೇರೀತಿ ಬದುಕಿದ್ದರೂ ಸತ್ತವರಂತೆ ಆಗಿಬಿಡುತ್ತೀರಿ. ಸೇವೆಯೇ ಬ್ರಾಹ್ಮಣಜೀವನದ ವಿಶೇಷ ಆಧಾರವಾಗಿದೆ. ಎಲ್ಲರೊಳಗೆ ಸೇವೆಯೇ ಸಮಾವೇಶವಾಗಿರಲಿ, ಸೇವಾಧಾರಿಗಳ ತಿಲಕವು ಎಲ್ಲರ ಮಸ್ತಕದಲ್ಲಿ ಇಟ್ಟುಕೊಂಡಿರಬೇಕು, ಗಯಾನದವರೂ ಸಹ ಸೇವೆಯ ಪ್ರಮಾಣವನ್ನು ಬಹಳಚೆನ್ನಾಗಿ ತೋರಿಸಿದ್ದಾರೆ. ಗಯಾನದ ವಿಶೇಷವ್ಯಕ್ತಿಗಳ ಉದಾಹರಣೆಯನ್ನು ಕೊಟ್ಟು, ಅನೇಕಸ್ಥಾನಗಳಲ್ಲಿ ಸೇವೆಯಾಗುತ್ತದೆ. ಗಯಾನೆ ಸೇವೆಯಲ್ಲಿ ವಿಶೇಷವಾಗಿ ನಿಮಿತ್ತವಾಗಿದೆ. ಹೇಗೆ ನಯನಗಳಲ್ಲಿ ನಕ್ಷತ್ರವು ಸಮಾವೇಶವಾಗಿದೆಯೋ, ಹಾಗೆಯೇ ಯಾರು ಬಾಪ್‌ದಾದಾರವರ ಅಗಲಿಮರಳಿ ಸಿಕ್ಕಿರುವ ರತ್ನವಾಗಿದ್ದಾರೆಯೋ, ಅವರೂ ನಯನಗಳಲ್ಲಿ ಸಮಾವೇಶವಾಗಿದ್ದಾರೆ.

ಜರ್ಮನಿ ಪಾರ್ಟಿ:- ಜರ್ಮನಿಯ ಪಾರ್ಟಿಯಂತು ಬಹಳಷ್ಟು ಕಮಾಲ್ ಮಾಡಬೇಕಾಗಿದೆ. ಜರ್ಮನಿಯವರು ಭವಿಷ್ಯಕ್ಕಾಗಿ ಇಂತಹ ಗ್ರೂಪನ್ನು ತಯಾರು ಮಾಡಿರಿ, ಅವರು ಭವಿಷ್ಯದಲ್ಲಿ ಬಂದು ತಮ್ಮ ಸೇವೆಯ ನಿಮಿತ್ತರಾಗಲಿ. ಸತ್ಯಯುಗದಲ್ಲಿಯೂ ಅಟೊಮಿಕ್ ಎನರ್ಜಿಯ ಕಾರ್ಯವು ನಡೆಯಬೇಕು. ಅಂದಮೇಲೆ ಜರ್ಮನಿಯಲ್ಲಿ ಸಂಪರ್ಕದಲ್ಲಿ ಬಂದಿರುವಂತಹ ಆತ್ಮರು ಇಂತಹ ಕಾರ್ಯದಲ್ಲಿ ಅಲ್ಲಿ ನಿಮಿತ್ತರಾಗುತ್ತಾರೆ. ತಾವಂತು ಮಾಲೀಕರಾಗುವಿರಿ ಆದರೆ ಸಂಪರ್ಕದಲ್ಲಿ ಇಂತಹವರು ಬರುತ್ತಾರೆ, ಅವರು ಸೇವೆಗೆ ನಿಮಿತ್ತರಾಗುತ್ತಾರೆ. ಅಂದಮೇಲೆ ಜರ್ಮನಿಯವರು ಬಹಳ ಸೇವೆಯನ್ನು ಮಾಡಬೇಕಾಗಿದೆ. ಸಾಹಸ ಮಕ್ಕಳದು ಸಹಯೋಗ ತಂದೆಯದು. ಯಾರು ಸಂಪರ್ಕದಲ್ಲಿ ಬರುತ್ತಾರೆಯೋ ಅವರ ಸೇವೆಯನ್ನು ಮಾಡುತ್ತಾ ಸಾಗಿರಿ.

2. ಸ್ವದರ್ಶನ ಚಕ್ರಧಾರಿಯೆಂದೂ ಸಹ ಏರುವಕಲೆ ಮತ್ತು ಇಳಿಯುವ ಕಲೆಯ ಚಕ್ರದಲ್ಲಿ ನಡೆಯಲು ಸಾಧ್ಯವಿಲ್ಲ. ಈಗ ಕಳೆದದ್ದು ಕಳೆಯಿತು. ಹೇಗೆ ಹಿಂದಿನ ವರ್ಷವು ಸಮಾಪ್ತಿಯಾಯಿತು, ಹಾಗೆಯೇ ಈ ಸಂಸ್ಕಾರವೂ ಸಮಾಪ್ತಿಯಾಗಿಬಿಡಬೇಕು. ಸಂಸ್ಕಾರರೂಪದಿಂದ ಪರಿವರ್ತನೆ, ಸಂಸ್ಕಾರವು ಬೀಜವಾಗಿದೆ. ಒಂದುವೇಳೆ ಬೀಜವೇ ಸಮಾಪ್ತಿಯಾಯಿತೆಂದರೆ ವೃಕ್ಷದ ಉತ್ಪತ್ತಿಯಾಗುವುದಿಲ್ಲ. ಬೀಜ, ವೃಕ್ಷವನ್ನು ಉತ್ಪತ್ತಿ ಮಾಡಬಾರದು, ಅದಕ್ಕಾಗಿ ಅದನ್ನು ಬೆಂಕಿಯಲ್ಲಿ ಸುಡಬೇಕಾಗುತ್ತದೆ. ಅಂದಮೇಲೆ ಬಲಹೀನತೆಗಳೆಂಬ ಬೀಜವನ್ನು ಸ್ಮೃತಿರ ಲಗನ್ನಿನ ಅಗ್ನಿಯಲ್ಲಿ ಹಾಕಿ ಸುಟ್ಟಾಗ ವೃಕ್ಷವು ಬೆಳೆಯುವುದಿಲ್ಲ ಅರ್ಥಾತ್ ಮನ-ವಾಣಿ ಮತ್ತು ಕರ್ಮದಲ್ಲಿ ಬಲಹೀನತೆಯೇ ಬರುವುದಿಲ್ಲ. ಹೇಗೆ ಹೋಲಿ ಸುಡುವುದರಲ್ಲಿ ಬುದ್ಧಿವಂತರಾಗಿದ್ದೀರಿ, ಹಾಗೆಯೇ ಹೋಲಿ(ಪವಿತ್ರ)ಯಾಗುವ ಹೋಲಿಯನ್ನು ಸುಡಬೇಕು, ಆಗಲೇ ಹೋಲಿ ಆಗಿಬಿಡುತ್ತೀರಿ. ಬಲಹೀನತೆಗಳನ್ನು ಸುಟ್ಟ ನಂತರ ವಿಘ್ನವಿನಾಶಕರಾಗಿಬಿಡುತ್ತೀರಿ. ಸದಾ ಈ ಬಿರುದನ್ನು ನೆನಪಿಟ್ಟುಕೊಳ್ಳಿರಿ - ನಾವು 'ವಿಘ್ನವಿನಾಶಕ'ರಾಗಿದ್ದೇವೆ. ಸ್ವಯಂನ ಜೊತೆಜೊತೆಯಲ್ಲಿ ವಿಶ್ವಕ್ಕೂ ವಿಘ್ನವಿನಾಶಕನಾಗಿದ್ದೇನೆ. ಈಗ ವಿಶ್ವದ ಸೇವೆಯಲ್ಲಿ ತೊಡಗಲೇಬೇಕಾಗುತ್ತದೆ.

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 07-01-1981.

***ಸಂಗಮ ಯುಗೀ ಚಕ್ರವರ್ತಿತ್ವದ ಹೆಸರಿನಿಂದ ಸತ್ಯಯುಗೀ ಚಕ್ರವರ್ತಿತ್ವ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸಂಗಮಯುಗೀ ನಿಶ್ಚಿಂತ ಚಕ್ರವರ್ತಿ.

2. ನನ್ನನ್ನು ಅಮೃತವೇಳೆ ಪ್ರಕೃತಿಯ ಯಜಮಾನಿಯಾದ ಭಗವಂತನು ಸ್ವಯಂ ಎಬ್ಬಿಸುತ್ತಾರೆ.

3. ನಾನು ಈ ಸಂಗಮ ಯುಗದಲ್ಲಿಯೇ ಸತ್ಯಯುಗೀ ಸಂಸ್ಕಾರಗಳನ್ನು ತುಂಬಿಕೊಂಡು ಪ್ರಾಲಬ್ಧವನ್ನು ತಯಾರು ಮಾಡಿಕೊಂಡಿದ್ದೇನೆ.

4. ನಾನು ವೃಕ್ಷಪತಿಯಿಂದ ಸರ್ವ ಸಂಬಂಧಗಳ ರಸ, ಸರ್ವಪ್ರಾಪ್ತಿ ಸಂಪನ್ನ ಪ್ರತ್ಯಕ್ಷ ಫಲವನ್ನು ಪಡೆದಿದ್ದೇನೆ.

5. ನಾನು ತಂದೆ, ತಾಯಿಯಾದ ಪರಮಾತ್ಮನಿಂದ ಪಾಲನೆಯನ್ನು ಪಡೆಯುತ್ತಿದ್ದೇನೆ.

6. ನಾನು ತಂದೆಯ ಮಡಿಲು, ಅತೀಂದ್ರಿಯ ಸುಖ, ಸಂತೋಷವೆಂಬ ಉಯ್ಯಾಲೆಯಲ್ಲಿ ತೂಗುತ್ತಿದ್ದೇನೆ.

7. ನಾನು ಸದಾ ತಂದೆ (ಅವಿನಾಶಿ ಆಟಿಕೆ)ಯೊಂದಿಗೆ ಬೇಕಾದ ಸಂಬಂಧವನ್ನು ಜೋಡಿಸಿ, ಅವರೊಂದಿಗೆ ಆಟವನ್ನು ಆಡಿಕೊಳ್ಳುತ್ತಿದ್ದೇನೆ.

8. ನಾನು ತಂದೆಯ ಸ್ಮೃತಿ ಎಂಬ ಹಾಸಿಗೆಯ ಮೇಲೆ ಮಲಗಿ, ತಂದೆಯೊಂದಿಗೆ ಸೂಕ್ಷ್ಮವತನಕ್ಕೆ ಹೋಗಿದ್ದೇನೆ.

9. ನಾನು ಬುದ್ಧಿಯ ವಿಮಾನದಿಂದ ಮೂರು ಲೋಕಗಳ ಪರಿಕ್ರಮಣ ಮಾಡಿದ್ದೇನೆ.

10. ನಾನು ತ್ರಿಲೋಕೀನಾಥನು & ತ್ರಿನೇತ್ರಿಯಾಗಿದ್ದೇನೆ.

11. ನಾನು ಜ್ಞಾನ ಸಂಪನ್ನ, ಶಕ್ತಿ ಸಂಪನ್ನ, ದಯಾ ಹೃದಯ ಸ್ವರೂಪ.

12. ನಾನು ವಿಶ್ವಕಲ್ಯಾಣಕಾರಿ, ಮಹಾದಾನಿ, ವರದಾನಿ.

13. ನಾನು ಸತ್ಯಯುಗದ ಪ್ರಾಲಬ್ಧವನ್ನು, ವರ್ತಮಾನ ಸಮಯದ ವಿಶೇಷತೆಯನ್ನು, ಪ್ರಾಪ್ತಿಯನ್ನು ತಿಳಿದುಕೊಂಡು ಪ್ರತೀ ಕ್ಷಣ, ಪ್ರತಿ ಸಂಕಲ್ಪವನ್ನು ಶ್ರೇಷ್ಠವಾಗಿ ತಯಾರು ಮಾಡಿಕೊಂಡಿದ್ದೇನೆ.